## ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯ ಬಗ್ಗೆ ದಿ: 09-12-2015 ರಂದು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು:

1. ಶ್ರೀ ಟಿ. ರಾಮನಾಯ್ಕ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ).
2. ಡಾ॥ ಶೇಖರ್ .ಡಿ ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ. ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ. ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ.

1. ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದ್ದು, ಕಛೇರಿ ಪೀಠೋಪಕರಣಗಳ ಪರಿಷ್ಕೃತ ನಕ್ಷೆ ಒದಗಿಸಿದ್ದು ಈ ಸಂಬಂಧ ದಿ: 14-10-2015 ರಂದು ನಡೆದ ಮಾನ್ಯ ಮುಖ್ಯ ಮಾಹಿತಿ ಆಯುಕ್ತರ ಸಭಾ ನಡವಳಿಯಂತೆ ಕಾರ್ಯವನ್ನು ಕೈಗೊಂಡಿದ್ದು, ಮುಂದಿನ ಕಾರ್ಯ ಪ್ರಗತಿಯನ್ನು ವೀಕ್ಷಿಸುವಂತೆ ದಿ: 30-11-2015ರ ಪತ್ರದಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ವಿಭಾಗದ ಕಾರ್ಯಪಾಲಕ ಅಭಿಯಂತರರು, ಪ್ರಧಾನ ಮುಖ್ಯ ವಾಸ್ತು ಶಿಲ್ಪಿಕಾರರು ನೀಡಿರುವ ಪೀಠೋಪಕರಣ ನಕ್ಷೆಗಳಿಗೆ ಮೇಲು ಸಹಿ ಮಾಡಲು ನಕ್ಷೆಗಳ ಪ್ರತಿಗಳನ್ನು ಸಹ ಕಳುಹಿಸಿರುವುದಾಗಿ ತಿಳಿಸುತ್ತಾ ಅವುಗಳನ್ನು ಕಾರ್ಯದರ್ಶಿಗಳು ಸಭೆಯ ಮುಂದೆ ಇರಿಸಿದರು.

    1. ಈ ಕೆಳಕಂಡಂತಹ ಅಂಶಗಳ ಬಗ್ಗೆ ಸಭೆ ಮತ್ತೊಮ್ಮೆ ಚರ್ಚಿಸಿ ಅವುಗಳನ್ನು ಸರಿಪಡಿಸಿ ನೀಡಬೇಕೆಂದು ಹಾಜರಿದ್ದ ಲೋಕೋಪಯೋಗಿ ಇಲಾಖೆಯ ಅಭಿಯಂತರರಿಗೆ ಸಭೆ ಸೂಚಿಸಿತು.
    2. ದಿ: 14-10-2015ರ ನಡವಳಿಯಂತೆ ಎಲ್ಲಾ ಕೋರ್ಟ್‌ಹಾಲ್‌ಗಳಲ್ಲಿ ಇರುವ 07 ಅವಶ್ಯಕತೆಗಳನ್ನು ಅಭಿಯಂತರರು ಪೂರೈಸಿರುವಂತೆ ಸಭೆಗೆ ತಿಳಿಸಿದರು ಅದರಂತೆ ನೆಲಮಹಡಿಯ (ಸೆಲ್ಲಾರ್)ನ South East **ಮೂಲೆಯಲ್ಲಿ ಡಿ.ಜಿ. ಸೆಟ್ ಅಳವಡಿಸಲು ಸಭೆ ಸಮ್ಮತಿಸುತ್ತಾ, ಅದಕ್ಕೆ ಸೂಕ್ತ** ಮೇಲ್ಛಾವಣಿ ಒದಗಿಸುವಂತೆ ಸಭೆ ಸೂಚಿಸಿತು.
    3. ಉಳಿದಂತೆ ಮಾನ್ಯ ಆಯುಕ್ತರ ಕೊಠಡಿ ಹಾಗೂ ಇತರೆ ಸೌಲಭ್ಯಗಳೆಲ್ಲವನ್ನು ಹೊಸದಾಗಿ ತಯಾರುಮಾಡಿರುವ ಪೀಠೋಪಕರಣ ನಕ್ಷೆಯಲ್ಲಿ ಒದಗಿಸಿರುವುದಾಗಿ ವಾಸ್ತು ಶಿಲ್ಪಿಕಾರರು ಸಭೆಗೆ ತಿಳಿಸಿದರು.
    4. ನೂತನ ಕಟ್ಟಡಕ್ಕೆ ಪೀಠೋಪಕರಣಗಳನ್ನು ಅಳವಡಿಸುವ/ಖರೀದಿಸುವ ಮುನ್ನ ಆಯೋಗದ ಅಭಿಪ್ರಾಯವನ್ನು ಪಡೆಯಲು ಸಭೆಯಲ್ಲಿ ಸೂಚಿಸಲಾಯಿತು.
    5. ಪ್ರತಿ ಕೋರ್ಟ್‌ಹಾಲ್‌ಗಳಲ್ಲಿ ವೀಡಿಯೋ ಕಾನ್ಫರೆನ್ಸ್ ಅಳವಡಿಸಲು ಎನ್.ಐ.ಸಿ.ಯವರ ಸಹಯೋಗದೊಂದಿಗೆ ಮಾಡುವಂತೆ ಸಭೆ ಸೂಚಿಸಿತು.
    6. ಮುಂಭಾಗದ ಪೋರ್ಟಿಕೋದಲ್ಲಿನ ಪಾಲ್ಸ್ ಅಳವಡಿಕೆಯ ಬಗ್ಗೆ ಸಭೆಗೆ ಆಗಮಿಸಿದ್ದ ಶಿಲ್ಪಿಕಾರರು ಅವರ ಮುಖ್ಯಸ್ಥರೊಂದಿಗೆ ಸಮಾಲೋಚಿಸಿ ಸೂಕ್ತ ನಿರ್ದೇಶನವನ್ನು ಪಡೆಯುವಂತೆ ಸಭೆ ಸೂಚಿಸಿತು.
    7. ಮಾಹಿತಿ ಆಯೋಗದ ನೂತನ ಕಟ್ಟಡದ ಕಾರ್ಯವನ್ನು ಮಾರ್ಚ್-2016ರ ಒಳಗಾಗಿ ಪೂರ್ಣಗೊಳಿಸಿ ಆಯೋಗದ ವಶಕ್ಕೆ ನೀಡಬೇಕು ಎಂಬುದರ ಬಗ್ಗೆ ಸಭೆ ಒಮ್ಮತದಿಂದ ತೀರ್ಮಾನಿಸಿ ಈ ಬಗ್ಗೆ ಮುಖ್ಯ ಅಭಿಯಂತರರು, ಕರ್ನಾಟಕ ಲೋಕೋಪಯೋಗಿ ಇಲಾಖೆಯ ಅಭಿಯಂತರರು ಹಾಗೂ ಮುಖ್ಯ ವಾಸ್ತು ಶಿಲ್ಪಕಾರರುಗಳಿಗೆ ತಿಳಿಸುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ ಕಾರ್ಯದರ್ಶಿ

ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು